

ಕಂಬಳವು ತುಳುನಾಡಿನ ಕ್ರೀಡೆಯೂ ಹೌದು. ಕರ್ನಾಟಕದ ಆಚರಣೆಯೂ ಹೌದು.

ಅಂತಹ ನಿರೀಕ್ಷೆಗಳಿಗೆ ಉತ್ತರವೆಂಬಂತೆ, ಭಾಷಾ ಮತ್ತು ಸಾಂಸ್ಕೃತಿಕ ಅಕಾಡೆಮಿಗಳು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಶ್ರಯದಲ್ಲಿ ಮೂಡಿ ಬಂದ ಬಳಿಕ ಪ್ರಾದೇಶಿಕ ಭಾಷಾ ಸಮುದಾಯಗಳಲ್ಲಿ ಅನೇಕ ರೀತಿಯ ಕೆಲಸಗಳು ನಡೆದವು.

ಬ್ಯಾರಿ, ಕೊಡವ, ತುಳು, ಕೊಂಕಣಿ, ಅರೆಭಾಷೆ ಅಕಾಡೆಮಿಗಳ ಆಶ್ರಯದಲ್ಲಿ ಸ್ಥಳೀಯ ಭಾಷೆಯ ಸಾಹಿತ್ಯಿಕ ಚಟುವಟಿಕೆಗಳು ವೇಗ ಪಡೆದುಕೊಂಡವು, ಸಂಶೋಧನೆಗಳು, ವಿವಿಧ ಸಾಂಸ್ಕೃತಿಕ ಚಟುವಟಿಕೆಗಳ ದಾಖಲೀಕರಣಗಳು ನಡೆದವು. ಮೌಖಿಕವಾಗಿಯೇ ಸಮೃದ್ಧವಾಗಿದ್ದ ಭಾಷೆಗಳು ಕನ್ನಡದ ಲಿಪಿಯಲ್ಲಿ ದಾಖಲೀಕರಣ ಕಾರ್ಯದತ್ತ ಹೊರಳಿಕೊಂಡವು.

ಕೊಂಕಣಿ ಭಾಷೆಯಲ್ಲಿ 41 ರೀತಿಯ ಭಾಷಾಸಮುದಾಯಗಳ ಭಾಗವಹಿಸುವಿಕೆ ಇರುವಂತೆ, ಕೊಡವ ಭಾಷೆಯಲ್ಲಿ ಸುಮಾರು 21 ಭಾಷಿಕ ಉಪಸಮುದಾಯಗಳು ಕೊಡವ ಸಂಸ್ಕೃತಿಯ ಭಾಗವಾಗಿ ಅಲ್ಲಿನ ವೈವಿಧ್ಯವನ್ನು ಹೆಚ್ಚಿಸಿವೆ. ಅದೇ ರೀತಿ, ತುಳು, ಕೊಂಕಣಿ, ಬ್ಯಾರಿ, ಅರೆಭಾಷೆ ಮುಂತಾದ ಭಾಷೆಗಳು ಒಟ್ಟು ಸೇರಿ ತುಳುವಿನ ಅಂದವನ್ನು ವೃದ್ಧಿಸಿವೆ. ಅಕಾಡೆಮಿಗಳ ವ್ಯಾಪ್ತಿಯಲ್ಲಿ ಈ ಪರಸ್ಪರ ಕೊಡು ಕೊಳ್ಳುವಿಕೆಯನ್ನು ಸಾಹಿತ್ಯಿಕವಾಗಿ ಗ್ರಹಿಸುವ, ಸಾಮುದಾಯಿಕ ಆಚರಣೆಗಳನ್ನು ಇನ್ನಷ್ಟು 'ಫೈನ್‌ಟ್ಯೂನ್' ಮಾಡುವ, ಪ್ರೋತ್ಸಾಹಿಸುವ ಕೆಲಸಗಳು ನಡೆಯುತ್ತಿವೆ.

### ಕನ್ನಡದ ಜೊತೆ ಕೊಡವರ ಅಸ್ಮಿತೆ

ಆಧುನಿಕ ಕೊಡಗಿನ ಇತಿಹಾಸದಲ್ಲಿ ಇಂಗ್ಲಿಷ್ ಭಾಷೆಗೆ ಮಹತ್ವದ ಸ್ಥಾನವಿದ್ದರೂ, ಆ ಒಲವು ಕೊಡವ ಭಾಷೆಗೆ ಸಂಬಂಧಿಸಿದ ಅಭಿಮಾನಕ್ಕೆ ಊನ ತಂದಿಲ್ಲ. ಬುಡಕಟ್ಟು ಸಮುದಾಯಗಳೇ ಒಟ್ಟು ಭಾಷೆಗೆ ವಿಶಾಲ ಒರತೆಯನ್ನು ಒದಗಿಸುವುದರಿಂದ ಮೌಖಿಕ ಸಾಹಿತ್ಯ ಪರಂಪರೆ ಶ್ರೀಮಂತವಾಗಿದೆ. ಪ್ರಕೃತಿಯ ಜೊತೆಗೇ ಒಡನಾಡುವ ಸಮುದಾಯಗಳು ಆಧುನಿಕವಾದ ಔಪಚಾರಿಕ ಜಗತ್ತಿನೊಡನೆ ಸಂವಹನ ಮಾಡಲು ಆರಂಭಿಸಿದ್ದು ಬಹಳ ತಡವಾಗಿಯೇ. ಅಪ್ಪನೆರವಂಡ ಅಪ್ಪಚ್ಚ ಕವಿ ಕೊಡವ ಭಾಷಾ ಸಾಹಿತ್ಯವನ್ನು ಕನ್ನಡದ ಲಿಪಿಯಲ್ಲಿ ಬರೆದರು. 'ಕಾವೇರಿ', 'ಯಯಾತಿ', 'ಸುಬ್ರಹ್ಮಣ್ಯ' ಎಂಬ ನಾಟಕಗಳನ್ನು ಬರೆಯುವ ಮೂಲಕ ಶಿಷ್ಟ ಸಾಹಿತ್ಯದ ಜನಪ್ರಿಯತೆಗೆ ಕಾರಣರಾದರು.

### ಬಂಜಾರರ ಹೆಮ್ಮೆಯ 'ಗೋರ್‌ಮಾಟೀ'

ಬಂಜಾರ ಸಮುದಾಯದ ಜನರು ದೇಶದ ವಿವಿಧೆಡೆಗಳಲ್ಲಿ ತಾಂಡಾಗಳಲ್ಲಿ ವಾಸಿಸುವವರು. ಕರ್ನಾಟಕದಲ್ಲಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಹೊರತಾಗಿ ಉಳಿದೆಡೆಗಳಲ್ಲಿ ಗಮನಾರ್ಹ ಸಂಖ್ಯೆಯಲ್ಲಿದ್ದಾರೆ. ಬಂಜಾರ ಸಮುದಾಯದ ಅಲೆಮಾರಿ ಜೀವನಶೈಲಿಯೇ ಅವರ ಭಾಷೆಯನ್ನು ಶ್ರೀಮಂತಗೊಳಿಸಿದೆ. 'ಗೋರ್‌ಮಾಟೀ' ಭಾಷೆಯಲ್ಲಿ ಮಾತನಾಡುವ ಅವರ ಪದ ಸಂಪತ್ತು ಶ್ರೀಮಂತ ಮತ್ತು ವೈವಿಧ್ಯದಿಂದ ಕೂಡಿರುವಂತಹದ್ದು.



ಡಾ. ಸಣ್ಣರಾಮ

ಉತ್ತರ ಕರ್ನಾಟಕದಲ್ಲಿ ವಾಸವಾಗಿರುವ ಬಂಜಾರಾ ತಾಂಡಾಗಳ ನಿವಾಸಿಗಳು ಆಡುವ ಮಾತು ಮತ್ತು ಧಾರವಾಡ ಕಡೆ ಬಂಜಾರ ಸಮುದಾಯದವರು ಆಡುವ ಮಾತು ತುಸು ಭಿನ್ನವಾಗಿದೆ. ಮೌಖಿಕ ಪರಂಪರೆಯ ಸಾಹಿತ್ಯವು ಅಗಾಧ ಪ್ರಮಾಣದಲ್ಲಿದ್ದರೂ ಶಿಷ್ಟ ಪರಂಪರೆಯನ್ನು ಸ್ವೀಕರಿಸಿರುವುದು ಇತ್ತೀಚೆಗಷ್ಟೆ. 'ಜಾಗತಿಕ ಬಂಜಾರಾ ಭಾಷಾ ಸಂಘ'ದ ಉತ್ಸಾಹಿ ಯುವಜನರು ಬಂಜಾರಾ ಭಾಷೆಯಲ್ಲಿಯೇ ಬರೆಯುವ ಪರಿಪಾಟವನ್ನು ಆರಂಭಿಸಿದ್ದಾರೆ ಎನ್ನುತ್ತಾರೆ ಪ್ರಾಧ್ಯಾಪಕರು ಹಾಗೂ ಬಂಜಾರಾ ನಿಘಂಟು ರಚನಾಕಾರರೂ ಆಗಿರುವ ಡಾ. ಸಣ್ಣರಾಮ ಅವರು. ಆದರೆ, ಬಂಜಾರ ಸಮುದಾಯದ ಸಾಂಸ್ಕೃತಿಕ ಆಚರಣೆಗಳ ಕುರಿತು ಬಹಳಷ್ಟು ಅಧ್ಯಯನಗಳು ಕನ್ನಡದಲ್ಲಿ ನಡೆದಿವೆ. ರಾಜಕೀಯ ಕ್ಷೇತ್ರದಲ್ಲಿ ಅವರ ಕೊಡುಗೆ, ಮಹಿಳೆಯರ ಜೀವನಶೈಲಿಯ ಅಧ್ಯಯನ, ಸುಂದರ ಕಸೂತಿಯೊಂದಿಗೆ ಕಂಗೊಳಿಸುವ ಅವರ ಉಡುಪಿನ ಕುರಿತು ಅನೇಕ ಸಂಶೋಧನೆಗಳು ವಿಶ್ವವಿದ್ಯಾಲಯಗಳಲ್ಲಿ ನಡೆದಿವೆ.

ಡಾ. ಸಣ್ಣರಾಮ ಅವರ ಸಂಪಾದನೆಯಲ್ಲಿ ಪ್ರಕಟವಾಗಿರುವ 'ಬಂಜಾರಾ ಶಬ್ದಕೋಶ'ವು ಈ ಭಾಷೆ ಮತ್ತು ಸಮುದಾಯದ ಆಚರಣೆಗಳ ಕುರಿತ ಸಮಗ್ರ ಮಾಹಿತಿಯನ್ನು ಕೊಡುತ್ತದೆ. ಅವರು ಬಳಸುವ ಗೋರ್‌ಮಾಟೀ ಭಾಷೆಯ ಒಂದು ಪದವನ್ನು ಕನ್ನಡ ಲಿಪಿಯಲ್ಲಿ ಉಲ್ಲೇಖಿಸಿ, ಅದನ್ನು ವಾಕ್ಯದಲ್ಲಿ ಬಳಸುವ ಕ್ರಮ, ಅದರ ಉಚ್ಚಾರಣೆಯ ವಿಧಾನವನ್ನು ಇಂಗ್ಲಿಷ್ ಅಕ್ಷರದಲ್ಲಿ ಹಾಗೂ ಕನ್ನಡದಲ್ಲಿ ಅದರ ಅರ್ಥವಿವರಣೆಯನ್ನು ನೀಡಲಾಗಿದೆ. ಹೀಗೆ ಅಲೆಮಾರಿ ಸಮುದಾಯದ ಜೀವನಾನುಭವದ ಪದಸಂಪತ್ತು ಕನ್ನಡದ ಲಿಪಿಯಲ್ಲಿ ಅರಳಿದೆ. ಅತ್ತ ಕನ್ನಡ ನಾಡಿನಲ್ಲಿ ತಮ್ಮದೇ ಆದ ಛಾಪು ಮೂಡಿಸುವಲ್ಲಿ ಈ ಸಮುದಾಯ ಯಶಸ್ವಿಯಾಗಿದೆ.